ಜನ ಹುಚ್ಚೆದ್ದು ಓಡಾಡಹತ್ತಿದರು. ದರ್ಬಾರಿನ ದೀಪಗಳೆಲ್ಲ ತಾನಾಗಿಯೇ ಹೊತ್ತಿಕೊಂಡವು. ತಾನಸೇನನ ಮೈಯಲ್ಲಿ ಬಿಸಿ ಏರಿತು. ದಾಹ ತಾಳಲಾರದೆ ಆತ ಕಂಗಾಲಾದ. ಅದೇ ಸಮಯಕ್ಕೆ ಸರಸ್ವತಿ ಹಾಗೂ ರೂಪವತಿಯರು ಮೇಘ ರಾಗ ಹಾಡಿದರು. ಮಳೆ ಸುರಿಯಿತು ವಾತಾವರಣವೆಲ್ಲ ತಂಪಾಯಿತು. ಈ ಘಟನೆಯ ನಂತರ ತಾನಸೇನ ಒಂದು ತಿಂಗಳು ಆರೈಕೆ ಪಡೆದ. ತಾನಸೇನ ಅನೇಕ ಜನ ಶಿಷ್ಯರನ್ನು ತಯಾರು ಮಾಡಿದ ಅವರೆಲ್ಲಿ ಲಾಲಖಾನ್, ಮಿಯಾಚಂದ, ರಂಗಖಾನ್, ಬಕ್ಷುಖಾನ್ ಮುಂತಾದವರು. **ಅವರಲ್ಲಿ** ಅಕ್ಬರನ ದರಬಾರಿನ ಸಂಗೀತಗಾರರಾಗಿದ್ದರು ಬಕ್ಷುಕಾನ್ ವಿಜಾಪೂರದ ಎರಡನೇ ಇಬ್ರಾಹಿಂ ಆದಿಲಷಾನ ಸಂಗೀತ ಗುರುವೆಂದು 'ರಾಗದರ್ಪಣ' ತಿಳಿಸುತ್ತದೆ. ತಾನಸೇನನ ಸಂಗೀತ ಪರಂಪರೆ ಇಬ್ರಾಹಿಂರ ಮೂಲಕ ದಕ್ಷಿಣಕ್ಕೂ ಹರಿದು ಬಂತು.

ತಾನಸೇನ ಸುಮಾರು ಎರಡು ಸಾವಿರಕ್ಕೂ ಮಿಕ್ಕಿ ಕವಿತೆಗಳನ್ನು, ಧ್ರುಪದ ಗೀತಗಳನ್ನು ಬೇರೆ ಬೇರೆ ರಾಗಗಳಲ್ಲಿ ರಚಿಸಿ ಹಾಡಿದ್ದಾನೆ. ಅವುಗಳೆಲ್ಲ 'ತಾನಸೇನ' ಎಂಬ ಅಂಕಿತ ಹೊಂದಿವೆ. ತಾನಸೇನ ಪ್ರಕೃತಿ ಆರಾಧಕನಾಗಿದ್ದರಿಂದ ಆತನ ಗೀತೆಗಳಲ್ಲಿ ನಿಸರ್ಗದ ವರ್ಣನೆ ಸಮೃದ್ಧವಾಗಿ ಕಂಡುಬರುತ್ತದೆ.

ತಾನಸೇನ ಸುಮಾರು ಇಪ್ಪತ್ತೇಳು ವರ್ಷಗಳಷ್ಟು ಸುದೀರ್ಘ ಕಾಲ ಅಕ್ಬರನ ಆಸ್ಥಾನದಲ್ಲಿದ್ದ . ಗ್ವಾಲಿಯರನಲ್ಲಿಯೇ ತನ್ನ ಕೊನೆ ದಿನಗಳು ಕಳೆಯಬೇಕೆಂಬುದು ಆತನ ಇಚ್ಛೆಯಾಗಿತ್ತು. ಆದರೆ ಅವನು (1595ರಲ್ಲಿ) ಆಗ್ರಾದಲ್ಲಿ ಕೊನೆಯುಸಿರನ್ನೆಳೆದ. ತಾನಸೇನನ ಇಚ್ಛೆಯಂತೆ ಅಕ್ಬರ ತಾನಸೇನನ ಶವವನ್ನು ರಾಜ ಗೌರವದಿಂದ ಗ್ವಾಲಿಯರಕ್ಕೆ ಕಳಿಸಿಕೊಟ್ಟ. ಸಮಸ್ತ ಸಂಗೀತಗಾರರು, ಅಪಾರ ಕಲಾಭಿಮಾನಿಗಳು ಶವಯಾತ್ರೆಯಲ್ಲಿ ಹಾಡುತ್ತ, ವಾದ್ಯ ನುಡಿಸುತ್ತ ತಾನಸೇನರನ್ನು ಮೆರವಣಿಗೆ ಮಾಡಿ ಗೋರಿ ಕಟ್ಟಿದರು.

ತಾನಸೇನರ ಗೋರಿ ಇಂದಿಗೂ ಗ್ವಾಲಿಯರದ ಒಂದು ಭಾಗ ವಜೀರಾ ವಿರಾಟ ಪರ್ವತದಲ್ಲಿ ಮಹಮ್ಮದಗೌಸರ ಸಮಾಧಿಯ ಹತ್ತಿರ ಇದೆ. ಅಲ್ಲಿ ಪ್ರತಿವರ್ಷ ಡಿಸೆಂಬರ ತಿಂಗಳಿನಲ್ಲಿ ಮಧ್ಯಪ್ರದೇಶ ಸರಕಾರ ಮೂರು ದಿನ ಅತ್ಯಂತ ಅದ್ದೂರಿಯಾಗಿ ಸಂಗೀತೋತ್ಸವ ನಡೆಸುತ್ತದೆ. ದೇಶದ ಹಿರಿ-ಕಿರಿಯ ಅನೇಕ ಸಂಗೀತಗಾರರು ಉತ್ಸವದಲ್ಲಿ ಭಾಗವಹಿಸಿ ಸಂಗೀತ ಸಾಮ್ರಾಟನಿಗೆ ಸ್ವರ ಶ್ರದ್ಧಾಂಜಲಿ ಅರ್ಪಿಸುತ್ತಾರೆ. ಮಧ್ಯಪ್ರದೇಶ ಸರಕಾರ ತಾನಸೇನನ ಹೆಸರಿನಲ್ಲಿ

ತಾನಸೇನನ ಜೀವಿತದ ಕಾಲಾವಧಿ ಭಾರತೀಯ ಸಂಗೀತದ ಪರ್ವಕಾಲವೆಂದು ಹೇಳಬೇಕು. ತಾನಸೇನನ ಸಂಗೀತ ಧ್ರುಪದ ಅಂಗದಿಂದ ಕೂಡಿತ್ತು. ಹಾಡುಗಾರಿಕೆಯಲ್ಲಿ ನೋಂ ತೋಂ ಪದ್ಧತಿ ರೂಢಿಯಲ್ಲಿತ್ತು. ತಾನಸೇನನ ಕಾಲಾವಧಿಯಲ್ಲಿ ಭಾರತೀಯ ಸಂಗೀತದಲ್ಲಿ ಅನೇಕ ಬದಲಾವಣೆಗಳಾದವು. ಅನೇಕ ಹೊಸ ವಾದ್ಯಗಳು ಆವಿಷ್ಕಾರ ಗೊಂಡವು. ಸಿತಾರ, ದಿಲರುಬಾ, ಸರೋದ, ಇಸರಾಜ ಮತ್ತು ಧ್ರುಪದದಿಂದ ಖಯಾಲ ಸಂಗೀತ ಬೆಳಕಿಗೆ ಬಂದವು.

'ದರ್ಬಾರಿ ಕಾನಡಾ', 'ಮಿಯಾಕಿತೋಡಿ', 'ಮಿಯಾಮಲ್ಹಾರ', 'ಮಿಯಾಕಿ ಸಾರಂಗ' ಮುಂತಾದ ರಾಗಗಳು ತಾನಸೇನನ ಸೃಷ್ಟಿ. ತಾನಸೇನನಿಗೆ ಸಂಸ್ಕೃತ, ಫಾರಸಿ, ಅರಬ್ಬಿ, ಟರ್ಕಿ, ಗ್ವಾಲಿಯರಿ, ಬ್ರಿಜ ಮೊದಲಾದ ಭಾಷೆಗಳ ಜ್ಞಾನವಿತ್ತೆಂದು ಆತನ ಅನೇಕ ಕೃತಿಗಳಿಂದ ತಿಳಿದುಬರುತ್ತದೆ. ತಾನಸೇನನು ಸಂಗೀತಶಾಸ್ತ್ರ ಕುರಿತು ಬರೆದ 'ಸಂಗೀತಸಾರ', 'ರಾಗಮಾಲಾ', 'ಗಣೇಶ ಸ್ತೋತ್ರ' (ಅದು ಈಗ ಲಭ್ಯವಿಲ್ಲ) ಕೃತಿಗಳು ಈ ಮಾತಿಗೆ ಪುಷ್ಟಿಯನ್ನು ಕೊಡುತ್ತವೆ. ಗ್ವಾಲಿಯರ್‌ಕಿ ತಾನ, ನಿಸ್ವರ ಹೋಗಯಿ ಹೈ, ಭಾರತಕೇ ಸಂಗೀತ ಸೂರ್ಯಕಾ ಅವಸಾನ ಹೋಗಯಾ' ಕವಿಪೀಥಲ ಜತೆಯಲ್ಲೇ ಮೆಹಫಿಲ ಹೋಯಿತು. ಕಾವ್ಯಶಾಸ್ತ್ರ ವಿನೋದಗಳೆಲ್ಲ ಬೀರಬಲ್ಲನ ಜತೆಯಲ್ಲೇ ಹೋದವು. ತಾನಸೇನನ ಜತೆಯಲ್ಲೇ ರಾಗ ಹೋಯಿತು ಎಂದು ತಾನಸೇನನ ಸಾವನ್ನು ಕಂಡು ಅಕ್ಬರ ಹೇಳಿದ ಈ ಮಾತುಗಳು ಇಂದಿಗೂ ಎಂದೆಂದಿಗೂ ಸತ್ಯವಾಗಿವೆ.

**ಪಂ. ಭೀಮಸೇನ ಜೋಶಿ**



ಭಾರತ ರತ್ನ ಪಂ. ಭೀಮಸೇನ ಜೋಶಿಯವರು ಪ್ರತಿಯೊಬ್ಬ ಭಾರತೀಯನಿಗೂ ಚಿರಪರಿಚಿತವಾಗಿರುವ ಮಹಾನ್ ಸಂಗೀತಗಾರರಾಗಿದ್ದಾರೆ. ಜನಿಸಿದ್ದು ಫೆಬ್ರುವರಿ 14, 1922 ರಂದು ರಥಸಪ್ತಮಿಯ ದಿನ, ರೋಣದಲ್ಲಿ. ಅವರ ಮನೆತನ ಸಂಗೀತಕ್ಕಾಗಿ ಹೆಸರಾದದ್ದೇನಲ್ಲ, ಇವರ ಅಜ್ಜ, ಬೀಮಸೇನಾಚಾರ್ಯರು ಕೀರ್ತನೆ ಮಾಡುತ್ತಿದ್ದರು. ಅವರದೊಂದು ತಂಬೂರಿ ಮನೆಯಲ್ಲಿತ್ತು. ಇದಷ್ಟು ಬಿಟ್ಟರೆ ಸಂಗೀತದ ನಂಟು ಅಷ್ಟಕ್ಕಷ್ಟೆ. ಆದರೆ ಇವರಿಗೆ ಬಾಲ್ಯದಿಂದಲೇ ಸಂಗೀತದ ನಂಟು ಅಂಟಿಕೊಂಡಿದ್ದು ಹೇಗೆ? ಎಂಬುದು ಕೆಲವು ವಿಚಿತ್ರ ಸಂಗತಿಗಳನ್ನು ಅವರ ಚರಿತ್ರೆಯಲ್ಲಿ ಬರುತ್ತವೆ.

ಒಂದು ರಾಷ್ಟ್ರೀಯ ಪ್ರಶಸ್ತಿ (1980ರಲ್ಲಿ) ಸ್ಥಾಪಿಸಿದೆ. ದೇಶದ ಪ್ರತಿಷ್ಠಿತ ಸಂಗೀತಗಾರರಿಗೆ ಪ್ರತಿವರ್ಷ ಈ ಪ್ರಶಸ್ತಿ(ತಾನಸೇನ ಪ್ರಶಸ್ತಿ) ನೀಡಲಾಗುತ್ತದೆ. ಮೊಟ್ಟಮೊದಲ 'ತಾನಸೇನ ಪ್ರಶಸ್ತಿ'ಯನ್ನು ಪಡೆದವರು ಕೃಷ್ಣರಾವ ಶಂಕರ ಪಂಡಿತ, ಹೀರಾಬಾಯಿ ಬಡೋದೆಕರ ಮತ್ತು ಬಿಸ್ಮಿಲ್ಲಾಖಾನ.

ಇವರಿಗೆ ಮೊದಲ ಸ್ವರ ಸಂಸ್ಕಾರವಾಗಿದ್ದು ತಾಯಿಯಿಂದ. ಆಕೆ ಹಾಡುತ್ತಿದ್ದ ದೇವರ ನಾಮಗಳು ಅವರಲ್ಲಿ ಸ್ವರ ಸಂಸ್ಕಾರದ ಅಂಕುರವನ್ನು ಮೂಡಿಸಿದವು. ಈ ಅಂಕುರ ಕಾಲಕ್ರಮೇಣ ಬೆಳೆಯುತ್ತ ಹೋಯಿತು. ಅವರ ಮನೆ ಹತ್ತಿರ ಮಸೀದಿಯೊಂದಿತ್ತು. ಬೆಳಿಗ್ಗೆ "ಅಲ್ಲಾ ಹೋ ಅಕ್ಬರ" ಎಂಬ ಧ್ವನಿ ಕಿವಿಗೆ ಬಿದ್ದೊಡನೆ ಭೀಮಸೇನರ ಕಿವಿಗಳು ಸ್ವರಗಳಿಗೆ ತೆರೆದುಕೊಳ್ಳುತ್ತಿದ್ದವು. ಒಂದೆರಡು ಸಂದರ್ಭಗಳಲ್ಲಿ ಮೂರು ವರ್ಷದ ಬಾಲಕ ಭೀಮಸೇನ ಮಸೀದೆಯಲ್ಲಿ ಕುಳಿತಿದ್ದು ಉಂಟು!

ಬಾಗಲಕೋಟೆಯಲ್ಲಿ ಒಂದು ಪ್ರಸಂಗ ಬಲು ರೋಚಕವಾಗಿದೆ. ಪಂ. ಭೀಮಸೇನ ಜೋಶಿಯವರ ತಂದೆ ಗುರುರಾಜಾಚಾರ್ಯರು ಬಾಗಲಕೋಟೆಯ ಬಸವೇಶ್ವರ ಹೈಸ್ಕೂಲನಲ್ಲಿ ಶಿಕ್ಷಕರಾಗಿದ್ದರು. ಆ ಸಂದರ್ಭದಲ್ಲಿ ಭೀಮಸೇನನಿಗೆ ಐದು ವರ್ಷ. ಮನೆಯ ಮುಂದೆ ಬಂದ ಮದುವೆಯ ದಿಬ್ಬಣದಲ್ಲಿ ಬಜಂತ್ರಿಯವರು ನುಡಿಸುತ್ತಿದ್ದ ಶಹನಾಯಿ ಮೋಡಿಗೆ ಒಳಗಾದ ಬಾಲಕ ಅವರ ಬೆನ್ನು ಹತ್ತಿ ಹೊರಟು ಹೋದ. ಕೆಲವು ಘಂಟೆಗಳ ತರುವಾಯ ಭೀಮಸೇನ ಕಾಣೆಯಾಗಿರುವುದು ಗಮನಕ್ಕೆ ಬಂತು. ತಂದೆಯವರು ಊರು ತುಂಬೆಲ್ಲ ಹುಡುಕಿದರು. ಬಾಲಕ ಪತ್ತೆ ಆಗಲಿಲ್ಲ. ಪೋಲಿಸ ಕಂಪ್ಲೆಂಟ ಕೊಡಲು ಹೋದಾಗ ಒಬ್ಬ ವ್ಯಕ್ತಿ ಮಲಗಿ ನಿದ್ರಿಸುತ್ತಿದ್ದ ಬಾಲಕ ಭೀಮಸೇನನನ್ನು ಒಪ್ಪಿಸಲು ಅಲ್ಲಿಗೆ ಬಂದ. ಆತ ಹೇಳಿದ ಈ ಬಾಲಕ ನಮ್ಮ ಮನೆಗೆ ಬಂದು ಯಾವಾಗ ಮಲಗಿದ ಗೊತ್ತಿಲ್ಲ. ಆದರೆ ಭಜಂತ್ರಿಯವರ ಜೋಡಿ ಬಂದ ಅಂತ ಅಲ್ಲಿ ಹೇಳಿದರು. ಅಲ್ಲಿಂದ ತಂದೆಯವರ ಜೊತೆ ಮನೆಗೆ ಬಂದರು.

ಮುಂದೆ ಕಾಲಕ್ರಮೇಣ ಪಂ. ಭೀಮಸೇನ ಜೋಶಿಯವರ ತಂದೆ ಗದುಗಿಗೆ ಬಂದರು. ಹೀಗೆ ದೊಡ್ಡವರಾಗುತ್ತ ಹೋದಾಗ ಸಂಗೀತದ ಹುಚ್ಚು ಅತಿಯಾಗತೊಡಗಿತು. ಭೀಮಸೇನ ತಂದೆಯವರಿಗೆ ದೊಡ್ಡ ಸಂಸ್ಕೃತ ಪಂಡಿತ ಅಥವಾ ದೊಡ್ಡ ಅಧಿಕಾರಿ ಮಾಡುವ ಆಸೆ ಇತ್ತು. ಆದರೆ ಸಂಗೀತದ ನಂಟು ಯಾರಿಂದಲು ಬಿಡಿಸಲಾಗಲಿಲ್ಲ. ಮಗನಿಗೆ ಸಂಗೀತ ಕಲಿಸಲೆಂದು ಅಗಸರ ಚೆನ್ನಪ್ಪ ಹಾಗೂ ನಂತರ ಬದಾಮಿ ಶಾಮಾಚಾರ್ಯರನ್ನು ಗೊತ್ತು ಮಾಡಿದರು. ಆದರೆ ಭೀಮಸೇನನಿಗೆ ತೀರದ ಜ್ಞಾನ ತೃಷೆ ಸಂಗೀತ ಜ್ಞಾನವನ್ನು ಹೀರಿಕೊಂಡಷ್ಟು

ಹಿಂಗದ ದಾಹ. ಅಗಸರ ಚೆನ್ನಪ್ಪಾ ಹಾಗೂ ಶಾಮಾಚಾರ್ಯರು ಬಂಡವಾಲು ಮುಗಿದರು. ಭೀಮಸೇನನ ಕಲಿಯುವ ದಾಹ ಹಿಂಗಲಿಲ್ಲ.

ಒಮ್ಮೆ ಚೆನ್ನಪ್ಪನವರು ಭೀಮಸೇನನನ್ನು ತಮ್ಮ ಗುರುಗಳಾದ ಉಭಯ ಗಾನ ವಿಶಾರದ ಪಂ. ಪಂಚಾಕ್ಷರಿ ಗವಾಯಿಗಳವರಲ್ಲಿ ಕರೆದುಕೊಂಡು ಹೋದರು. ಅಭಿಮಾನದಿಂದ ಭೀಮಸೇನನನ್ನು ಗವಾಯಿಗಳೆದರು ಹಾಡಲು ಕೂರಿಸಿದರು. ಭೀಮಸೇನ ಹಾಡಿದ. ಹಾಡು ಕೇಳಿದ ಗವಾಯಿಗಳವರು "ಚನ್ನಪ್ಪ ಆವಂಗ ಕಲಿಸೋದು ನಿನ್ನ ತಾಕತ್ತಲ್ಲ. ಅವನ ಅಪ್ಪಗ ಹೇಳು ಅವನು ನನ್ನ ಹತ್ತಿರ ಕಲೀಲಿ. ಇಲ್ಲಂದ್ರ ಪುಣಾ–ಮುಂಬೈಕ್ಕೆ ಕಳಿಸಲಿ ಎಂದು ಹೇಳಿದರು, ಪಂಚಾಕ್ಷರಿ ಗವಾಯಿಗಳವರ ಈ ಮಾತನ್ನು ಆಲಿಸಿದ ಭೀಮಸೇನನಿಗೆ ಕಲಿಯಬೇಕೆನ್ನುವ ಆಸೆಯನ್ನು ಇನ್ನಷ್ಟು ಪ್ರಬಲಗೊಳಿಸಿತು."

ತಂದೆ ಸಂಸ್ಕೃತ ಕಲಿಯಲು ಉತ್ತರ ಭಾರತಕ್ಕೆ ಮನೆ ಬಿಟ್ಟು ಹೋದಂತೆ ಭೀಮಸೇನನು ಕೂಡಾ ಸಂಗೀತ ಕಲಿಯಲು ಓಡಿಹೋದ. ಮೊದಲು ಬಿಜಾಪುರ, ಅಲ್ಲಿಂದ ಪುಣೆ, ಮುಂದೆ ಮುಂಬೈ, ಅಲ್ಲಿಂದ ಗ್ವಾಲಿಯರ. ಪುಣೆಯಲ್ಲಿರುವಾಗ ಮಾಸ್ಟರ ಕೃಷ್ಣರಾವ ಪುಲಂಬ್ರೀಕರ ತಿಂಗಳಿಗೆ ನೂರು ರೂಪಾಯಿ ಫೀಸು ಕೇಳಿದರು. ಕೂಳಿಗೂ ಗತಿಯಿಲ್ಲದ ಬಾಲಕ ಎಲ್ಲಿಂದ ತಂದಾನು? ಗ್ವಾಲಿಯರನಲ್ಲಿರುವಾಗ ರಾಜಾ ಭೈಯ್ಯಾ ಪುಚ್ಛವಾಲೆ, ಉಸ್ತಾದ ಹಾಫೀಜ್ ಅಲಿಖಾನ (ಸರೋದಿಯಾ ಪಂ. ಅಮ್ಜದಅಲಿಖಾನರ ತಂದೆ)ರಲ್ಲಿ ಮಾಧವ ಸಂಗೀತ ವಿದ್ಯಾಲಯದಲ್ಲಿ ಶಿಕ್ಷಣ ಅಲ್ಲಿಂದ ಮುಂದೆ ಕೊಲ್ಕತ್ತಾದ ಭೀಷ್ಮದೇವ ಚಟರ್ಜಿಯವರಲ್ಲಿ ಪ್ರಯಣ. ಚಟರ್ಜಿಯವರು ಸಂಗೀತ ಕಲಿಯಲು ಬಂದವರನ್ನು ಕೇಳಿದರು. "ಸಿನಿಮಾದಲ್ಲಿ ನಟಿಸುವೆಯಾ?" ಭೀಮಸೇನ ದೃಢವಾದ ಸ್ಪಷ್ಟವಾದ ಧ್ವನಿಯಲ್ಲಿ ನಿರಾಕರಿಸಿದಾಗ ಚಟರ್ಜಿ ಐವತ್ತು ರೂಪಾಯಿ ಎಸೆದು "ತೊಲಗಾಚೆ" ಎಂದರು. ಅಲ್ಲಿಂದ ಜಲಂಧರದಲ್ಲಿ "ಮಂಗತರಾಮ ಆರ್ಯ ಸಂಗೀತ ವಿದ್ಯಾಲಯ"ದಲ್ಲಿ ಸೇರ್ಪಡೆ. ಅಲ್ಲಿ ಭೇಟಿಯಾದ ವಿನಾಯಕರಾವ ಪಟವರ್ಧನ ಹೇಳಿದರು. ನಿಮ್ಮೂರಿನ ಹತ್ತಿರದಲ್ಲೇ ಸವಾಯಿಗಂಧರ್ವರಿದ್ದಾರೆ. ಇಷ್ಟು ದೂರ ಏಕೆ ಬಂದೆ ಇದನ್ನು ಕೇಳಿದ ಭೀಮಸೇನ ಜೋಶಿ ಮನೆಗೆ ಮರಳಿದರು.

1935ರಲ್ಲಿ ಸವಾಯಿ ಗಂಧರ್ವರಲ್ಲಿ ಶಿಷ್ಯ ವೃತ್ತಿ ಆರಂಭ. ಮೊದಲು ಒಂದುವರೆ ವರ್ಷ ಗುರುಗಳ ಮನೆಯಲ್ಲಿ ಇದ್ದರು. ಗುರುಗಳು ಏನನ್ನು ಕಲಿಸಲಿಲ್ಲ. ಆ ದಿನವೆಲ್ಲ ಗುರುಗಳು ಹಾಡಿದ್ದನ್ನು ಕೇಳುವ ಭಾಗ್ಯ ಮಾತ್ರ ಭೀಮಸೇನನಿಗಿತ್ತು.

ಇದಕ್ಕೆ ಕಾರಣವು ಇತ್ತು ವಯಾಮಾನಕ್ಕನುಗುಣವಾಗಿ ಭೀಮಸೇನನ ಧ್ವನಿ ಬಡಿದಿತ್ತು. ಧ್ವನಿ ಒಂದು ಹಂತಕ್ಕೆ ಬರುವವರೆಗೆ ಏನನ್ನು ಕಲಿಸಬಾರದೆಂಬುದು ಗುರುಗಳ ಸಂಕಲ್ಪ. ಇಂತಹ ಈ ಸಂದರ್ಭದಲ್ಲಿ ಗುರುಗಳ ಸಂಕಲ್ಪದಂತ ಕೆಲವು ಕರ್ತವ್ಯಗಳನ್ನು ಗುರುಗಳ ಮನೆಯಲ್ಲಿ ಮಾಡಬೇಕಾಗಿತ್ತು. ಒಂದುವರೆ ಕಿ. ಮೀ. ದೂರದ ಬಾವಿಯಿಂದ ಭಾರವಾದ ಕೊಡಗಳಲ್ಲಿ ನೀರು ತರುವುದು. ಈ ಕೆಲಸ ಅಷ್ಟೇನು ಸುಲಭವಾದುದಲ್ಲ! ಇದು ನಿತ್ಯ ಎರಡು ಸಮಯ ನಿರ್ವಹಿಸಬೇಕಾದ ಕೆಲಸ. ಈ ಕೆಲಸ ಮುಗಿದ ಮೇಲೆ ಉಳಿದ ಸಮಯದಲ್ಲಿ ನಿರಂತರ ಅಭ್ಯಾಸ.

ಹೀಗೆ ಅನೇಕ ಕಷ್ಟಗಳನ್ನು ಎದುರಿಸಿ ಗುರುವಿನ ಪಾತ್ರಕ್ಕೆ ಶರಣಾಗುತ್ತಾರೆ. ಗುರುವಿನಿಂದ ಪ್ರೀತಿ ಮತ್ತು ಸಂಗೀತ ಕಲಿತು ಮುಂದೆ ತಮ್ಮ ಕಛೇರಿ ಪ್ರಾರಂಭ ಹಾನಗಲ್ಲನಲ್ಲಿ ಮಾಡುತ್ತಾರೆ. ಹೀಗೆ ಮುಂದೇ ಶಿವಮೊಗ್ಗಾ, ಮಂಗಳೂರು, ಮದ್ರಾಸ, ಹೀಗೆ ಅನೇಕ ಕಡೆ ಸಂಗೀತ ಕಛೇರಿ ನೀಡುತ್ತಾರೆ. ಕೇವಲ ಭಾರತ ಮಾತ್ರವಲ್ಲದೆ ಫ್ರಾನ್ಸ್, ಕೆನಡಾ, ಅಮೇರಿಕಾ, ಜಪಾನ, ಅನೇಕ ದೇಶ, ವಿದೇಶಗಳಲ್ಲಿ ತಮ್ಮ ಸಂಗೀತ ಕಛೇರಿ ನೀಡಿ ಭಾರತೀಯ ಶಾಸ್ತ್ರೀಯ ಸಂಗೀತ ಕೇಳಿಸುವಲ್ಲಿ ಪ್ರಮುಖರಾಗುತ್ತಾರೆ.

ಪಂ. ಭೀಮಸೇನ ಜೋಶಿಯವರಿಗೆ ಸಂದ ಪ್ರಶಸ್ತಿಗಳು ಲೆಕ್ಕವಿಲ್ಲದಷ್ಟು ರಾಜ್ಯ ಸಂಗೀತ, ನೃತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ, ತಾನಸೇನ, ಕಾಳಿದಾಸ, ಸಮ್ಮಾನ, ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. 2005 ರಲ್ಲಿ "ಕರ್ನಾಟಕ ರತ್ನ" ಪ್ರಶಸ್ತಿ 2011 ರಲ್ಲಿ "ಭಾರತ ರತ್ನ" ಪ್ರಶಸ್ತಿ ಪಡೆದು ದೇಶದ ಸಂಗೀತ ಜಗತ್ತಿಗೆ ಬಹುದೊಡ್ಡ ರತ್ನವಾಗಿದ್ದಾರೆ.

ಇವರ ಶಿಷ್ಟ ಪರಂಪರೆ ದಿ. ಪಂ. ಮಾದವಗುಡಿ, ದಿ. ಶ್ರೀಪತಿ ಪಾಡೆಗಾರ, ನಾರಾಯಣ ದೇಶಪಾಂಡೆ, ಉಪೇಂದ್ರಭವ, ಶ್ರೀಕಾಂತ ದೇಶಪಾಂಡೆ, ರಾಮಕೃಷ್ಣ ಪಟವರ್ಧನ, ಆನಂತ ತೆರಿದಾಳ ಹೀಗೆ ಇನ್ನು ಅನೇಕ ಶಿಷ್ಯರನ್ನು ಹೊಂದಿದ್ದು, ಪಂ. ಭೀಮಸೇನ ಜೋಶಿಯವರು ಕೇವಲ ಭಾರತವಲ್ಲದೆ ಜಗತ್ತಿಗೆ ಬೇಕಾದ ಸಂಗೀತದ ವಜ್ರ ಇಂತಹ ಮಹಾನ ವ್ಯಕ್ತಿ. ಬಂಧು ಬಳಗ ಅನೇಕ ಶಿಷ್ಯವೃಂದ, ಶ್ರೋತ್ರಗಳನ್ನು ಬಿಟ್ಟು ದಿ. 24 ಜನೇವರಿ, 2011 ರಲ್ಲಿ ತಮ್ಮ ಸ್ವಗೃಹದಲ್ಲಿ ನಿಧನಹೊಂದಿದರು.

**ಪಂ.ಬಸವರಾಜ ರಾಜಗುರು**



ಭಾರತೀಯ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರರಲ್ಲಿ ಪಂ॥ ಬಸವರಾಜ ರಾಜಗುರು ಒಬ್ಬರು ಕೂಡಾ ಮಹಾನ್ ಶ್ರೇಷ್ಠಗಾಯಕರು. ಇಡಿ ದೇಶಕ್ಕೆ ಮಾದರಿಯಾದಂತ ಒಬ್ಬ ಮಹಾನ್ ಸಂಗೀತ ಗುರುಗಳು ಹೌದು. ಇತಂಹ ಮಹಾನ್ ಸಂಗೀತಗಾರ ಜನಿಸಿದ್ದು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಯಲಿವಾಳದಲ್ಲಿ ತಂದೇ ಮಹಾಂತಸ್ವಾಮಿಗಳು, ತಾಯಿ ರಾಚವ್ವ. ಇವರ ಕೊನೆಯ ಸುಪುತ್ರನಾಗಿ ಪಂ॥ ಬಸವರಾಜಗುರು ಹುಟ್ಟಿದ್ದು. 1920ರ ಆಗಸ್ಟ್ 24ರಂದು ತಂದೆ ಮಹಾಂತಸ್ವಾಮಿ ಹಾಗೂ ತಾಯಿ ರಾಚವ್ವ ದಂಪತಿಗಳವರ ತುಂಬಿದ ಸಂಸಾರ ಮೂರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. ಮಹಾಂತಸ್ವಾಮಿಗಳ ಪೂರ್ವಜರು ಕರ್ನಾಟಕ ಪ್ರಸಿದ್ಧ ರಾಜಮನೆತನಗಳಲ್ಲಿ ಒಂದಾದ ಕೆಳದಿ ಸಂಸ್ಥಾನಿಕರಲ್ಲಿ ರಾಜಗುರುಗಳಾಗಿದ್ದರು. ಹೀಗಾಗಿ ಕೆಳದಿ ಮಠ ಎಂಬುದು ಮರೆಯಾಗಿ ರಾಜಗುರು ಎಂಬುದೇ ಮನೆತನದ ಹೆಸರಾಯಿತು. ಕೆಳದಿಯ ಸಂಸ್ಥಾನ ಅವನತಿ ಹೊಂದಲು ರಾಜಗುರು ಮನೆತನ ಕುಂದಗೊಳ ತಾಲ್ಲೂಕಿನ ಯಲಿವಾಳ ಗ್ರಾಮಕ್ಕೆ ವಲಸೆ ಬಂದಿರುವ ಸಾಧ್ಯತೆಗಳಿವೆ.

ಪಂ॥ ಬಸವರಾಜ ರಾಜಗುರುಗಳವರ ತಂದೆ ಕರ್ನಾಟಕ ಸಂಗೀತದಲ್ಲಿ ಪರಿಶೀಲೆಯನ್ನು ಪಡೆದ ಕಲಾವಿದರಾಗಿದ್ದರು. ತಂಜಾವೂರಿಗೆ ಹೋಗಿ ಹಲವಾರು ವರ್ಷಗಳ ಕಾಲ ಅಲ್ಲಿ ನೆಲೆನಿಂತು ಕರ್ನಾಟಕ ಸಂಗೀತವನ್ನು ಕಲಿತು ಬಂದವರು, ಹಾಡುಗಾರಿಕೆ ಹಾಗೂ ಪಿಟೀಲು ವಾದನಗಳಲ್ಲಿ ನಿಷ್ಣಾತರನಿಸಿದವರು. ಪಂ॥ ಬಸವರಾಜ ರಾಜಗುರು ಅವರಿಗೆ ಸಂಗೀತ ಬಂದಿದ್ದು ಅವರ ತಂದೆಯಿಂದಲೇ ಅವರೇ ಬಸವರಾಜರಿಗೆ ಮೊದಲಗುರು. ಕರ್ನಾಟಕ ಸಂಗೀತದಲ್ಲಿ ಸಂಗೀತದ **ಶ್ರೀಕಾರ** ಬರೆದ ಬಸವರಾಜ ರಾಜಗುರು ಮುಂದೆ ಹಿಂದೂಸ್ತಾನಿ ಸಂಗೀತದ ಅಪ್ರತಿಮ ಗಾಯಕರಾಗಿ ರೂಪುಗೊಂಡರು.

ಪಂ॥ ಬಸವರಾಜರು ತಮ್ಮ ಏಂಟನೇ ವಯಸ್ಸಿನಲ್ಲಿಯೇ ಸಂಗೀತ ಕಲಿಯಲು ಪ್ರಾರಂಭಿಸಿದರು. ಇಂತಹ ಚಿಕ್ಕವಯಸ್ಸಿನಲ್ಲಿ ಹಾರ್ಮೋನಿಯಂ ವಾದನವನ್ನು ನುಡಿಸುತ್ತ ಹಾಡಲು ಕಲಿಯ ತೊಡಗಿದರು. ಇದೇ ಸಂದರ್ಭದಲ್ಲಿ

ಬಾಲಕ ಬಸವರಾಜನಿಗೆ ತನ್ನ ನೆಲೆ ಏನಿದ್ದರೂ ಸಂಗೀತದಲ್ಲಿಯೇ ಎಂಬ ಅರಿವುಂಟಾಗತೊಡಗಿತ್ತು. ಅನೇಕ ಹಿರಿಯ ಕಲಾವಿದರ ಕಿರ್ತನಗಳನ್ನು ಯಥಾಸ್ತಿತಿ ಹಾಡಿತೋರಿಸುವ ಅನುಕುರಣಾ ಶಕ್ತಿ ಇತ್ತು. ತನ್ನ ಕಂಚಿನ ಕಂಠ ಹಾಗೂ ಸುಂದರವಾದ ಮುಖಾರವಿಂದಿಂದಾಗಿ ಬಸವರಾಜ ಎಲ್ಲರ ಪ್ರಿತಿಗೂ ಪಾತ್ರನಾದ.

ಆದರೆ ವಿಧಿಯ ಲೆಕ್ಕಚಾರವೆ ಬೇರೆಯಾಗಿತ್ತು ಇವರು ಚಿಕ್ಕವಯಸ್ಸಿನಲ್ಲಿರುವಾಗಲೆ ತಾಯಿ ರಾಚಮ್ಮನವರು ಅರಾಲಿಕ ಸಾವಿಗೆ ಈಡಾದರು. ಮುಂದೆ ತಂದೆ ಮಹಾಂತಸ್ವಾಮಿಗಳೇ ತಂದೆ–ತಾಯಿ ಆಗಿ ಆಸರೆಯಾದರು. ಮುಂದೆ ಬಸವರಾಜ ರಾಜಗುರುಗಳವರ ಸಂಗೀತ ಬೆಳೆಯಲು ಪ್ರೇರಣೆಯಾಗಿದ್ದು ಅಂದಿನ ನಾಟಕ ಕಂಪನಿಗಳು. ಪ್ರಥಮದಲ್ಲಿ ನಾಟಕದಲ್ಲಿ ಪಾತ್ರಕೂಡಾ ನಿರ್ವಹಿಸಿದರು ಹಾಗೆ ನಾಟಕದಲ್ಲಿ ಹಾಡಲು ಪ್ರಾರಂಭಿಸಿದರು. ಅಂದಿನ ನಾಟಕವೆಲ್ಲವು ಸಂಗೀತಮಯ ನಾಟಕಗಳಾಗಿರುತ್ತಿದ್ದವು. ನಾಟಕ ಕಂಪನಿಯಲ್ಲಿ ನಟನೆ ಮತ್ತು ಸಂಗೀತ ಎರಡು ಸುಲಭ ರೀತಿಯಲ್ಲಿ ಕಲಿಯಲು ಅವಕಾಸವಿರುತಿತ್ತು. ಆ ರೀತಿಯಲ್ಲಿ ಪಂ॥ ಬಸವರಾಜರಿಗೆ ನಾಟಕದಿಂದ ಸಂಗೀತದ ಬುನಾದಿ ಸ್ಥಿರವಾಯಿತು.

ಮುಂದೆ ಬಸವರಾಜರ ಸಂಗೀತ ಕಲಿಯಲು ಪ್ರೇರಣೆಯಾಗಿದ್ದು ಹುಬ್ಬಳಿಯ ಮೂರುಸಾವಿರ ಮಠ ಹಿರಿಯ ಅಣ್ಣನಾದ ರೇವಣಸಿದ್ಧಯ್ಯಾನವರು ಸಂಸ್ಕೃತ ಅಧ್ಯಯನ ಮಾಡಲು ಮಠಕ್ಕೆ ಸೇರಿಸಿದರು. ಶ್ರೀ ಚಂದ್ರಶೇಖರ ಶಾಸ್ತ್ರಿಗಳಲ್ಲಿ ಸಂಸ್ಕೃತಾಧ್ಯಯನ ಮಾಡುತಿದ್ದ ಒಂದು ದಿನ ಮೂರು ಸಾವಿರ ಮಠಕ್ಕೆ ಪಂ॥ ಪಂಚಾಕ್ಷರಿ ಗಾವಾಯಿಗಳು ಆಗಮಿಸಿದರು. ಅವರೆದುರಿಗೆ ಗುರುಸಿದ್ಧಸ್ವಾಮಿಗಳ ಅಪ್ಪಣೆಯ ಮೇರೆಗೆ ಬಸವರಾಜ ಹಾಡಿದ. ಆತನ ಹಾಡು ಕೇಳಿದ ಪಂಚಾಕ್ಷರಿಗವಾಯಿಗಳು ಈತನೊಬ್ಬ ಪ್ರತಿಭಾನ್ವಿತ ಗಾಯಕನೂ. ವಿಧಿಯ ನಿಮಿತ್ತ ಇಲ್ಲಿ ಸಂಸ್ಕೃತ ಕಲಿಯುತಿದ್ದಾನೆ ಎಂದು ಅರಿತುಕೊಂಡರು. ಸುಶ್ರಾವ್ಯಕಂಠ ಹೊಂದಿರುವ ಇವನು ಒಬ್ಬ ಶ್ರೇಷ್ಠ ಸಂಗೀತಗಾರನಾಗಬಲ್ಲ ಎಂದು ಸ್ವಾಮಿಜಿಗಳಿಗೆ ಪಂಚಾಕ್ಷರಿಗವಾಯಿಗಳು ಹೇಳಿದರು. ಉಭಯಗಾನ ವಿಶಾರದರೆಂದು ಖ್ಯಾತರಾದ ಪಂಚಾಕ್ಷರಿಗವಾಯಿಗಳ ದಿವ್ಯಕಟಾಕ್ಷವೇ ದೊರಕಿತೆಂದ ಮೇಲೆ ಕೇಳುವುದೇನು?

ಮುಂದೆ ಪಂಚಾಕ್ಷರಿಗವಾಯಿಗಳವರ ಶಿಷ್ಯತ್ವಪಡೆದು ಸುಮಾರು 12 ವರ್ಷ ಸಂಗೀತ ಅಭ್ಯಾಸಗೈದು ಒಬ್ಬ ಶ್ರೇಷ್ಠಗಾಯಕನಾಗಿ ಹೊರಹೊಮ್ಮಿದರು.

1938ರಷ್ಟೊತ್ತಿಗೆ ಬಸವರಾಜ ರಾಜಗುರು ಆಕಾಶವಾಣಿಯಲ್ಲಿ ಹಾಡುವಷ್ಟು ತಯಾರಿಯಾಗಿತ್ತು. ಗ್ವಾಲಿಯರ ಘರಾಣೆಯ ಶ್ರೇಷ್ಠಗಾಯಕನಾಗಿ ನಾಡಿನ ತುಂಬೆಲ್ಲ ಕಾರ್ಯಕ್ರಮ ನೀಡಲು ಪ್ರಾರಂಭಿಸಿದರು. 1941ರಲ್ಲಿ ಮುಂಬೈಗೆ ಧಾವಿಸಿದರು ಅಲ್ಲಿ ರೇಡಿಯೋ ಕಾರ್ಯಕ್ರಮುಗಳು. ಎಚ್.ಎಂ.ವಿ. ಕಂಪನಿಗಳ ರೆಕಾರ್ಡಿಂಗ್ ಇತ್ಯಾದಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮುಂದೆ ಇನ್ನು ಕಲಿಯುವ ಹಂಬಲದಿಂದ ಉಸ್ತಾದ ಅಬ್ದುಲ ಕರಿಂಖಾನ ಸಾಹೇಬರ ಮಗನೂ ಆದ ಸುರೇಶಬಾಬು ಮಾನೆ ಅವರ ಹತ್ತಿರ ಎರಡು ವರ್ಷಗಳ ಕಾಲ ಕಿರಣಾ ಘರಾಣೆಯು ಶೈಲಿಯು ಹಾಡುಗಾರಿಕೆಯು ತಾಲೀಮು ಮುಂದುವರೆಯಿತು. ಇದೇ ಸಂದರ್ಭದಲ್ಲಿ ಅನೇಕ ಮಹತ್ವದ ಸಂಗೀತ ಕಾರ್ಯಕ್ರಮುಗಳಲ್ಲಿ ಭಾಗವಹಿಸುವ ಅವಕಾಶಗಳು ಅವರಿಗೆ ಲಭಿಸಿದವು. 1943ರಲ್ಲಿ ನಾಗಪುರದಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳದಲ್ಲಿ ಹಾಡುಗಾರಿಕೆಯನ್ನು ಪ್ರಸ್ತುತ ಪಡಿಸುವುದರ ಮೂಲಕ ದೇಶಾದ್ಯಂತ ಪ್ರಸಿದ್ಧಿಯನ್ನು ಪಡೆದರು.

1950ರಲ್ಲಿ ಆಕಾಶವಾಣಿ ಧಾರವಾಡ ಕೇಂದ್ರವು ಪ್ರಾರಂಭಗೊಂಡ ನಂತರ ಪಂ॥ ಬಸವರಾಜರು ಧಾರವಡಕ್ಕೆ ಬಂದು ನೆಲೆಸಿದರು ಮುಂದೆ ಧಾರವಾಡದಲ್ಲಿ ಅನೇಕ ಶಿಷ್ಯರನ್ನು ತಯಾರು ಮಾಡಿದರು, ಇವರಿಗೆ ಶಿಷ್ಯರ ಸರಮಾಲೆಯೇ ಇದೆ. ಇವರಿಗೆ ಇದ್ದ ಶಿಷ್ಯ ಪರಂಪರೆ ಬೇರೆ ಯಾವ ಕಲಾವಿದನಿಗೂ ಇಲ್ಲವೆಂದು ಹೇಳಬಹುದು.

ಇವರ ಶಿಷ್ಯರಲ್ಲಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದವರು ಪಂ॥ ಸೋಮನಾಥ ಮಂಡೂರು, ಪಂ॥ ಗಣಪತಿ ಭಟ್ಟ ಹಾಸಣಗಿ ಪಂ॥ ಡಾ॥ ಹನುಮಣ್ಣಾನಾಯಕ ದೊರೆ, ಶಿವಾನಂದ ಪಾಟೀಲ, ಸಂಗೀತಾ ಕಟ್ಟಿ–ಕುಲ್ಕರ್ಣಿ, ಶ್ರೀಪಾದ ಹೆಗಡೆ ಪರಮೇಶ್ವರ ಹೆಗಡೆ, ಶಾಂತಾರಾಮ ಹೆಗಡೆ, ಇಷ್ಟೆ ಅಲ್ಲದೆ ಇಷ್ಟೆ ಅಲ್ಲದೆ ಇನ್ನು ಅನೇಕ ಶಿಷ್ಯರು ಇವರಿಗಿದ್ದಾರೆ. ಪ್ರಸ್ತುತವಾಗಿ ರಾಜಗುರು ಪರಂಪರೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಇವರಿಗೆ ಸಂದ ಪ್ರಶಸ್ತಿಗಳು ಅನೇಕ ಸಂಗೀತ ರತ್ನ (1947) ಪಂಡಿತ (1950) ಗಾನಗಂಧರ್ವ, ಸ್ವರಸಾಮ್ರಾಟ (1971) ರಾಜ್ಯ ಸಂಗೀತ ನೃತ್ಯ ಅಕಾಡೆಮಿ

ಪ್ರಶಸ್ತಿ (1972) ಪದ್ಮಶ್ರೀ (1975) ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ (1986) ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟೋರೇಟ್ (1989) ಪದ್ಮಭೂಷಣ (1991) ಹುಕುಮಿ ಎಕ್ಕಾ, ಸೂರ್‌ಕಾ ಬಾದಶಾಹಾ, ಎಂದೇ ಸಂಗೀತ ಲೋಕದಲ್ಲಿ ಮಿನುಗಿದ ದೃವತಾರೆ ಎಂದೆ ಹೆಸರು ಪಡೆದ ಇಂತಹ ಮಹಾನ ಸಂಗೀತ ಚೇತನ ತಮ್ಮ ಅನೇಕ ಶಿಷ್ಯ-ಪರಂಪರೆ, ಅನೇಕ ಶೋತೃಗಳನ್ನು ಬಂಧುಬಳಗವನ್ನು ಬಿಟ್ಟು ಜುಲೈ 21-1991 ಮಧ್ಯರಾತ್ರಿ ಸ್ವರಲೀನರಾದರು, ಪಂ॥ ಬಸವರಾಜ ರಾಜಗುರು ತಮ್ಮ ಸಂಗೀತದ ಮೂಲಕ ಅಮರರು. ಅವರ ಶಿಷ್ಯರ ಮೂಲಕ ಅವರ ಸಂಗೀತ ಜೀವಂತವಾಗಿದೆ.

**ಪಂ. ರವಿಶಂಕರ**



ಸಿತಾರ ವಾದನದ ಮೂಲಕ ಭಾರತಿಯ ಸಂಗೀತಕ್ಕೆ ವಿಶ್ವಾದ್ಯಂತ ಮನ್ನಣೆ ತಂದು ಕೊಟ್ಟಿರುವ ಪಂ. ರವಿಶಂಕರ ಅವರು ಭಾರತದ ಹಾಗೂ ವಿಶ್ವದ ಶ್ರೇಷ್ಠ ಸಂಗೀತಗಾರರಲ್ಲಿ ಅಗ್ರಮಾನ್ಯರಾಗಿ ಜಗತ್ತಿನ ಎಲ್ಲೆಡೆ "ಪುಡಿತ್‌ಜಿ" ಎಂದು ಗೌರವ ಪಾತ್ರರಾಗಿದ್ದಾರೆ. 1920 ಏಪ್ರೀಲ್ 7 ರಂದು ಬನಾರಸದಲ್ಲಿ ಬಂಗಾಳಿ ಬ್ರಾಹ್ಮಣ ವಿದ್ವಾಂಸರ ಕುಟುಂಬದಲ್ಲಿ ಜನಿಸಿದ ರವಿಶಂಕರ ಅವರ ಅಣ್ಣ ಉದಯಶಂಕರ ಅವರು ಭಾರತದ ಖ್ಯಾತ ನೃತ್ಯಕಲಾವಿದರಾಗಿದ್ದರು. ತಮ್ಮ ಅಣ್ಣನವರ ನೃತ್ಯ ತಂಡದೊಂದಿಗೆ ನೃತ್ಯಾಭ್ಯಾಸಗೈದ ರವಿಶಂಕರ ಅವರು, ಸಿತಾರವಾದ್ಯದ ನಾದದ ರುಚಿಹತ್ತಿದ್ದ ನಂತರ ನೃತ್ಯವನ್ನು ತೊರೆದು ಭಾರತದ ಶ್ರೇಷ್ಠ ಸಂಗೀತ ಗುರುಗಳಾಗಿದ್ದ ಉಸ್ತಾದ ಅಲ್ಲಾಉದ್ದೀನ್ ಖಾನ ಅವರ ಬಳಿ ಶಿಷ್ಯವೃತ್ತಿ ಪಡೆದು ಸಿತಾರ ವಾದ್ಯದ ಸಾಧನೆ ಪ್ರಾರಂಭಿಸಿದರು ಮಧ್ಯಪ್ರದೇಶದ ಮೈಹರ ಎಂಬಲ್ಲಿ ಮಹಾರಾಜರ ಆಸ್ಥಾನ ಗುರುವಾಗಿದ್ದ ಅಲ್ಲಾಉದ್ದೀನ್‌ಖಾನ ಅವರು ತಾವು ತಾನಸೇನ ವಂಶಜರಿಂದ ಪಡೆದಿದ್ದ ಅಮುಲ್ಯವಾದ ಸಂಗೀತ ವಿದ್ಯೆಯನ್ನು ರವಿಶಂಕರ ಅವರಿಗೆ ಹಲವಾರು ವರ್ಷಗಳ ಪರ್ಯಂತ ಧಾರೆಯೆರೆದರು. ಅಲ್ಲಾಉದ್ದೀನ್ ಅವರ ಸಂಗೀತವು ಮೈಹರ ಘರಾಣೆ ಎಂದೇ ಹೆಸರಾಗಿದೆ. ಇಂತಹ ಮೈಹಾರ ಘರಾನೆಯ ಉತ್ಕೃಷ್ಠ ವಾದನಶೈಲಿ ಹಾಗೂ ಸುವ್ಯವಸ್ಥಿತ ರಾಗನಿರೂಪಣಾಕ್ರಮಗಳನ್ನು ಕರಗತ ಮಾಡಿಕೊಂಡ ರವಿಶಂಕರ ಅವರು ಮುಂದೆ ತಮ್ಮದೇ ಆದ ವಿನೂತನ ವಾದನಶೈಲಿಯನ್ನು ಅಭಿವೃದ್ಧಿಪಡಿಸಿಕೊಂಡರು, ಇದು

'ರವಿಶಂಕರ ಬಾಜ್' ಎಂದು ಲೋಕ ಪ್ರಸಿದ್ದವಾಯಿತು. 1941ರಲ್ಲಿ ಅವರು ತಮ್ಮ ಗುರುಗಳ ಮಗಳು ಹಾಗು ವಿಶ್ವದ ಪ್ರಥಮ ಮಹಿಳಾ ಸೂರಬಹಾರ ವಾದಕಿಯಾದ ವಿದುಷಿ ಅನ್ನಪೂರ್ಣಾದೇವಿ ಯವರನ್ನು ಮದುವೆಯಾದರು.

ಗುರುಗಳ ಪದತಲದಲ್ಲಿನ ಸಂಗೀತ ಸಾಧನೆಯ ನಂತರ ಪಂ. ರವಿಶಂಕರರು ದೆಹಲಿ ಆಕಾಶವಾಣಿಯಲ್ಲಿ ವಾದ್ಯವೃಂದ ಸಂಯೋಜಕರಾಗಿ ವೃತ್ತಿ ಜೀವನ ಪ್ರಾರಂಭಿಸದರೂ ಅಲ್ಪಕಾದಲ್ಲಯೇ ಅದನ್ನು ತ್ಯಜಿಸಿ ವಿಶ್ವದಾದ್ಯಂತ ಸ್ವತಂತ್ರವಾಗಿ ಸಂಚರಿಸತೊಡಗಿದರು. ಈ ಮಧ್ಯ ಅಮೇರಿಕಾದ ಕಾಲಿಪೋರ್ನಿಯಾ ಆರ್ಟ್ಸ್ ವಿಶ್ವವಿದ್ಯಾಲಯದಲ್ಲಿ ಭಾರತೀಯ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಹಾಗೂ ವಿಶ್ವದ ಹಲವಡೆ ಗೌರವ ಪ್ರಾಧ್ಯಪಕರಾಗಿ ಸಂಗೀತ ಶಿಕ್ಷಣರಂಗದಲ್ಲಿ ಸೇವೆಗೈದರು. 1963 ರಲ್ಲಿ ಲಾಸ್ ಎಂಜಲೀಸನಲ್ಲಿ ಸಂಗೀತಶಾಲೆಯನ್ನು ಪ್ರಾರಂಭಿಸಿದ ಅವರು ಸಿತಾರವಾದನವನ್ನು ಭಾರತಿದಿಂದ ಹೊರಗೆ ಪರಿಚಯಸಿ ವಿಶ್ವಮನ್ನಣೆ ತಂದು ಕೊಟ್ಟ ತೀರ್ತಿಗೆ ಪಾತ್ರರಗಿದ್ದಾರೆ. ವಿದೇಶಗಳಲ್ಲಿ ಅವರಷ್ಟು ಸಂಗೀತ ಕಾರ್ಯಕ್ರಮಗಳನ್ನು ನೀಡಿದ ಕಲಾವಿದರು ಮತ್ತೊಬ್ಬರಿಲ್ಲ. ಅವರ ಕಲೆಗೆ ಮರುಳಾಗಿ ಅಸಂಖ್ಯಾತ ವಿದೇಶೀಯರು ಅವರ ಶಿಷ್ಯರಾದರು ಅವರಲ್ಲಿ ಪ್ರಮುಖರೆಂದರೆ ವಿಶ್ವವಿಖ್ಯಾತ 'ಬೀಟಲ್ಸ್' ತಂಡದ ಜಾರ್ಜ ಹ್ಯಾರಿಸನ್ ಮತ್ತು ಇತರರು ಭಾರತದಲ್ಲಯೂ ಅನೇಕ ಅಗ್ರಮಾನ್ಯ ಕಲಾವಿದರು ರವಿಶಂಕರರ ಶಿಷ್ಯರಾಗಿದ್ದಾರೆ.

ಪಂಡಿತಜಿಯವರು ಭಾರತೀಯ ಸಂಗೀತದಲ್ಲಿ ಅನೇಕ ವಿನೂತನ ಪ್ರಯೋಗಗಳನ್ನು ಹುಟ್ಟುಹಾಕಿದರು, ವಿದೇಶಿ ಸಂಗೀತದೋಡನೆ ಭಾರತೀಯ ಸಂಗೀತವನ್ನು ಬೆರೆಸಿ ಫ್ಯೂಜನ್ ಎಂಬ ಹೊಸ ಮಾದರಿಯ ಸಂಗೀತವನ್ನು ಸೃಜಿಸಿದ ಕೀರ್ತಿ ಪಂಡಿತಜಿಯವರಿಗೆ ಸಲ್ಲುತ್ತದೆ. ಅವರು ಕರ್ನಾಟಕ ಮತ್ತು ಹಿಂದುಸ್ತಾನಿ ಸಂಗೀತದ ಮಿಲನಕ್ಕೂ ಕಾರಣಪುರುಷರಾಗಿದ್ದು ಹಲವಾರು ಕರ್ನಾಟಕಿ ರಾಗಗಳು ಮತ್ತು ಸವಾಲ್–ಜವಾಬ್ ನಂತಹ ಮೆಟ್ಟಲುಗಳನ್ನು ಹಿಂದುಸ್ತಾನಿ ಸಂಗೀತಕ್ಕೆ ಪರಿಚಯಿಸಿ ಪ್ರಚಾರಗೊಳಿಸಿದರು. ಭಾರತೀಯ ಸಂಗೀತದಲ್ಲಿ ಜುಗಲಬಂದಿ ಪ್ರಯೋಗವನ್ನು ಯಶಸ್ವಿಯಾಗಿ ಪರಿಚಯಸಿದ ಪಂಡಿತಜಿಯವರು ಅಲಿ ಅಕ್ಬರನ ಅವರೊಂದಿಗೆ ಸರೋದ –ಸಿತಾರ ಜುಗಲಬಂದಿ ಮೂಲಕ ವಿಶ್ವಾದ್ಯಂತ ಶ್ರೋತೃಗಳ ಮನ ಸೆಳೆದರು. ವಿಶ್ವವಿಖ್ಯಾತ ವ್ಹಾಯಲಿನ್ ವಾದಕ ಯಹೂದಿ ಮೆನುಹಿನ್ ಅವರೊಂದಿಗೆ ಭಾರತೀಯ –ಪಾಶ್ಚಾತ್ಯ ಸಂಗೀತದ ಜುಗಲಬಂದಿ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದರು. ಸ್ವತಃ ಹಲವಾರು ರಾಗಗಳ್ನು ಸೃಜಿಸಿರುವ ಪಂಡಿತಜಿಯವರು ಅನೇಕ ಚಲನಚಿತ್ರಗಳಿಗೆ ಸಂಗೀತ ನಿರ್ದೇಶನವನ್ನು ನೀಡಿದ್ದಾರೆ. ಅವರು ನಿರ್ಮಿಸಿದ

ರಾಗಗಳಲ್ಲಿ ಪ್ರಮುಖವಾದುವೆಂದರೆ ಪರಮೇಶ್ವರಿ , ಅಹಿರ ಲಲಿತ, ಜೋಗೇಶ್ವರಿ, ಇತ್ಯಾದಿ ಅವರು ಸಂಗೀತ ನಿರ್ದೇಶಿಸಿದ ಚಲನಚಿತ್ರಗಳಲಲ್ಲಿ ಪ್ರಮುಖವಾದವು ಧರತಿಕಾ ಲಾಲ್, ಪಥೇರ್ ಪಾಂಚಾಲಿ, ಅನುರಾಧಾ, ಗೋದಾನ್, ಗಾಂಧೀ (ಅಡೆನಬರೊ) ಇತ್ಯಾದಿಗಳು. ಇಬವೆಲ್ಲವೂ ಅವರಿಗೆ ವಿಶ್ವಮಟ್ಟದಲ್ಲಿ ಗೌರವ ತಂದುಕೊಟ್ಟವು. ಪಂಡಿತಜಿಯವರು ಭಾರತೀಯ ಸಂಗೀತದಲ್ಲಿ ವಾದ್ಯವೃಂದಕ್ಕೆ ಮಹತ್ವದ ಸ್ಥಾನವನ್ನು ತಂದುಕೊಟ್ಟರು, ಆಕಾಶವಾಣಿಯಲ್ಲಿ ಮೊಟ್ಟಮೊದಲಬಾರಿಗೆ ವಾದ್ಯವೃಂದವನ್ನು ಯಶ್ವಸಿಗೊಳಿಸಿದ ಅವರು ಏಷ್ಯನ್ ಕ್ರೀಡಾಕೂಟದ ಉದ್ಘಾಟನೆಗಾಗಿಯೂ ವಾದ್ಯವೃಂದವನ್ನು ನಿರ್ದೇಶಿಸಿದ್ದರು.

ತಮ್ಮ ಅತ್ಯುತ್ಕೃಷ್ಟ ಸಾಧನೆಗಾಗಿ ಪಂ. ರವಿಶಂಕರ ಅವರು ಅಸಂಖ್ಯಾತ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಹಲವಾರು ಗೌರವ ಡಾಕ್ಟರೇಟಗಳು ಹಾಗೂ ರಾಜ್ಯಸಭಾ ಸದಸ್ಯತ್ವವು ಅವರಿಗೆ ಲಭಿಸಿವೆ. ಅವರಿಗೆ ಸಂದ ಪುರಸ್ಕಾರಗಳಲ್ಲಿ ಪ್ರಮುಖವಾದವು ಪದ್ಮಭೂಷಣ (1967), ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಪದ್ಮವಿಭೂಷಣ (1981), ಕಾಳಿದಾಸ ಸಮ್ಮಾನ (1987), ಮ್ಯಾಗ್ಸೆಸೆ ಪುರಸ್ಕಾರ (1992), ಗ್ರಾಮಿ ಆವಾರ್ಡ (1967–2012), ಇತ್ಯಾದಿಗಳು. ಅವರ ಜೀವಮಾನದ ಸಾಧನೆಯನ್ನು ಪರಿಗಣಿಸಿ ಘನ ಭಾರತ ಸರಕಾರವು 1999ರಲ್ಲಿ ದೇಶದ ಸರ್ವೋಚ್ಚ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ಭಾರತೀಯ ಸಾಂಸ್ಕೃತಿಕ ರಾಯಭಾರಿ ಎಂದೇ ಪರಿಗಣಿತರಾಗಿದ್ದ, ಪಂಡಿತ್ ರವಿಶಂಕರ ಅವರು ತಮ್ಮ 92ನೇ ವಯಸ್ಸಿನಲ್ಲಿ ಅಮೇರಿಕಾದ ಸ್ಯಾನ್‌ಡಿಯಾಗೋದಲ್ಲಿ 13ನೇ ಡಿಸೆಂಬರ್ 2012 ರಂದು ನಿಧನರಾದರು. ಭೌತಿಕವಾಗಿ ಅವರು ಇಹಲೋಕ ತ್ಯಜಿಸಿದರೂ ಸಮಸ್ತ ಭಾರತೀಯ ಸಂಗೀತ ಪ್ರಿಯರಿಗೆ, ಕಲಾವಿದರಿಗೆ ಹಾಗೂ ವಿದ್ಯಾರ್ಥಿಗಳಿಗೆ ಚಿರಸ್ಫೂರ್ತಿಯಾಗಿದ್ದಾರೆ. ತಮ್ಮ ಅಸಂಖ್ಯಾತ ಧ್ವನಿಮುದ್ರಿಕೆಗಳು ಹಾಗೂ ಶಿಷ್ಯಬಳಗದ ಮೂಲಕ ಗರಿಷ್ಠ ಪ್ರಮಾಣದಲ್ಲಿ ಸಿತಾರ ಸಂಗೀತವನ್ನು ಮುಂದಿನ ತಲೆಮಾರಿನವರಿಗಾಗಿ ಪಂ.ರವಿಶಂಕರಜಿ ಅವರು ಕೊಡುಗೆಯಾಗಿ ನೀಡಿದ್ದಾರೆ.

## ಉಸ್ತಾದ ರೆಹಮತ್ ಖಾನ್



ದಕ್ಷಿಣ ಭಾರತಕ್ಕೆ ಸಿತಾರವಾದ್ಯವನ್ನು ಪರಿಚಯಿಸಿ ಪ್ರಚಾರಗೊಳಿಸಿದವರೆಂದರೆ ಉಸ್ತಾದ ರೆಹಮತ್ ಖಾನ್ ಅವರು. ಸಂಪೂರ್ಣ ಕರ್ನಾಟಕ ಸಂಗೀತವೇ ಆವರಿಸಿಕೊಂಡಿದ್ದ ಉತ್ತರ ಕರ್ನಾಟಕದ ಧಾರವಾಡದಲ್ಲಿ ನೆಲೆಸಿದ ರೆಹಮತ್ ಖಾನರು ಮೂಲತಃ ಗುಜರಾತಿನ ಭಾವನಗರದವರು. ಜನನ 1854 ಇವರ ಅಜ್ಜ ಮದಾರಬಕ್ಷ ಅವರು ರತ್ಲಂ ರಾಜಾಸ್ಥಾನದಲ್ಲಿಯೂ ಮುತ್ತಜ್ಜ ದೌಲತ್‌ಖಾನ್‌ರು ಇಂದೋರ್ ಆಸ್ಥಾನದಲ್ಲಿಯೂ ಹಾಗು ತಂದೆ ಗುಲಾಮ ಹುಸೇನ್ ಖಾನರು ಭಾವನಗರ ಆಸ್ಥಾನದಲ್ಲಿಯೂ ಸಂಗೀತಗಾರರಾಗಿದ್ದವರು. ಇಂತಹ ಸಂಗೀತಗಾರರ ಮನೆತನದಲ್ಲಿ ಜನಿಸಿದ ರೆಹಮತ್ ಖಾನರು ಸಹಜವಾಗಿಯೇ ಸಂಗೀತದೆಡೆಗೆ ಚಿಕ್ಕ ವಯಸ್ಸಿನಲ್ಲಿ ಆಕರ್ಷಿತರಾದರು ಹಾಗೂ ತಂದೆಯಿಂದ ಗಾಯನದ ತರಬೇತಿ ಪಡೆದರು. ಅಲ್ಪಕಾಲದ ನಂತರ ಮಾವ ನಬೀಬ ಖಾನ್‌ರ ಸಿತಾರವಾದನರಿಂದ ಪ್ರಭಾವಿತರಾಗಿ ಅದರಿಂದ ಸಿತಾರವಾದನದ ತರಬೇತಿ ಪಡೆಯತೊಡಗಿದರು.

ರೆಹಮತ್ ಖಾನರನ್ನು ಗಾಯಕರನ್ನಾಗಿ ತಯಾರು ಮಾಡುವ ಇಚ್ಛೆ ಹೊಂದಿದ್ದ ತಂದೆಯು ಕೊನೆಗೂ ಮಗನ ಅಪೇಕ್ಷೆಗೆ ಮನಸೋತು, ಭಾವನಗರದ ಆಸ್ಥಾನದ ಬೀನವಾದಕರಾಗಿದ್ದ ಉಸ್ತಾದ ಹಬೀಬ್ ಖಾನರ್ ಬಳಿ ಶಿಷ್ಯ ವೃತ್ತಿಗೆ ತೊಡಗಿಸಿದರು. ಹಬೀಬ ಖಾನರು ನಿಷ್ಠಾವಂತ ಗುರುವಾಗಿದ್ದು, ಯೋಗ್ಯ ಶಿಷ್ಯರಿಗೆ ಮಾತ್ರ ಸಂಗೀತ ಪಾಠ ಮಾಡುತ್ತಿದ್ದರು. ಒಮ್ಮೆ ರೆಹಮತ್ ಖಾನರ ಸೇವಾ ಕಿಂಕರತೆಯನ್ನು ಕಂಡು, ಪ್ರೀತಿಯಿಂದ ವರ್ಷಗಟ್ಟಲೇ ಪಾಠ ಮಾಡಿದರು ಹಾಗೂ ಕಾರ್ಯಕ್ರಮಗಳಿಗೆ ತಮ್ಮ ಜೊತೆ ಕರೆದುಕೊಂಡು ಹೋಗುತ್ತಿದ್ದರು. ಹೀಗಾಗಿ ಗುರುಗಳ ಜೊತೆಗೆ ಶಿಷ್ಯನ ಹೆಸರು – ಕೀರ್ತಿಗೂ ಬೆಳೆದವು. ಅವರ ಕೀರ್ತಿಯನ್ನು ಕೇಳಿ ಲಿಂಬಡಿ ಸಂಸ್ಥಾನದ ದೊರೆಗಳು ಅಹ್ವಾನಿಸಿಕೊಂಡು, ತಮ್ಮ ಆಸ್ಥಾನದಲ್ಲಿ ವಿಶೇಷವಾಗಿ ಕಾರ್ಯಕ್ರಮ ಮಾಡಿಸಿದರು. ತದನಂತರ, ರೆಹಮತ್ ಖಾನರು ಮಂಗ್ರೋಲ್, ಜಾಮನಗರ, ಗುಜರಾತ, ನಾಗಪುರ, ರಾಯಗಡ, ಕಛ್, ಓರಿಸ್ಸಾ, ಪಂಜಾಬ್, ಸಿಂಧ ಹೀಗೆ ಅನೇಕ ಕಡೆಗೆ ಸಂಚರಿಸಿ ಸಿತಾರವಾದನದ ಕಾರ್ಯಕ್ರಮ ನೀಡಿ, ಪ್ರೇಕ್ಷಕರ ಹಾಗೂ ವಿದ್ವಾಂಸರ ಮನಸೂರೆಗೊಂಡರು.

1874ರಲ್ಲಿ ಇಂದೋರಿನ ಮಹಾರಾಜರಿಂದ ಆಮಂತ್ರಿತರಾಗಿ ರಾಜಸ್ಥಾನದಲ್ಲಿ ಸಿತಾರವಾದನವನ್ನು ಗೈದರು ಸಂಗೀತ ಪೋಷಕರಾಗಿದ್ದ ಮಹಾರಾಜ ಶಿವಾಜಿರಾವ ಹೋಳ್ಕರರು 1878ರಲ್ಲಿ ರಹಿಮುತ್ ಖಾನರನ್ನು ಆಸ್ಥಾನಕಲಾವಿದರನ್ನಾಗಿ ನೇಮಿಸಿಕೊಂಡರು. ದೇಶ ಸರ್ವಶ್ರೇಷ್ಠ ಬೀನ್ ವಾದಕರಾಗಿದ್ದ ಬಂದೇ ಅಲಿಖಾನ ಅವರೂ ಅದೇ ದರಬಾರಿನಲ್ಲಿ ಆಸ್ಥಾನಕಲಾವಿದರಾಗಿದ್ದರು ರಹಿಮತ್‌ಖಾನರು ಬಂದೇ ಅಲಿಖಾನ ಅವರ ಶಿಷ್ಯತ್ವವಹಿಸಿಕೊಂಡು ವರ್ಷಗಟ್ಟಲೇ ಪ್ರತಿದಿನವ್ರೂ 8–10 ತಾಸು ರಿಯಾಜಗೈದು ಅಪ್ರತಿಮ ಬೀನ್ ವಾದಕರಾಗಿ ಹೊರಹೊಮ್ಮಿದರು.

ಇಂದೋರ ದರಬಾರವನ್ನು ತ್ಯಜಿಸಿದ ನಂತರ ರಹಿಮತ್ ಖಾನರು ಮುಂಬೈಗೆ ಬಂದು ನೆಲೆಸಿದರು ಹಾಗೂ ಜನಪ್ರೀಯತೆಯನ್ನು ಗಳಿಸಿದರು. ತದನಂತರ ಪುಣೆ ನಗರಕ್ಕೆ ಬಂದು ಅಲ್ಲಿ ಭಾರತ ಗಾಯನ ಸಮಾಜ ಎಂಬ ಸಂಗೀತಶಾಲೆಯನ್ನು ತೆರೆದು ಹಲವಾರು ಶಿಷ್ಯರಿಗೆ ಸಂಗೀತಪಾಠ ಹೇಳಿಕೊಟ್ಟರು ಅವರ ಕೀರ್ತಿಯು ನಾಗಪೂರ, ಗಗನಬಾವಡಾ, ಭೋರ, ಜಮಖಂಡಿ, ಸಾಂಗಲಿ, ಕುರಂದವಾಡ, ಮೀರಜ, ಮುಂತಾದ ಕಡೆ ಹಬ್ಬಿತು ಹಾಗು ಈ ಎಲ್ಲ ಕಡೆ ಬೀನ ಮತ್ತು ಸಿತಾರವಾದನದ ಕಾರ್ಯಕ್ರಮ ನೀಡಿ ಮೆಚ್ಚುಗೆ ಗಳಿಸಿದರು ರಹಿಮತ್ ಖಾನರ ಸಂಗೀತ ಕೀರ್ತಿಯನ್ನು ಕೌಸಿಕ ಮಹಾನ್ ಸಂಗೀತ ಪೋಷಕರಾಇದ್ದ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ರಹಿಮತಖಾನನನ್ನು ಮೈಸೂರಿಗೆ ಆಹ್ವಾನಿಸಿ ಸಿರಾತವಾದನವನ್ನು ಕೇಳಿ ಧನ ಕನಕಾರಿಗಳೊಂದಿಗೆ ಸತ್ಕರಿಸಿದರು ಹಾಗೂ ಸಿತಾರರತ್ನ ಎಂಬ ಬಿರುದಿನಿಂದ ಗೌರವಿಸಿದರು.

ಮೈಸೂರಿಗೆ ಬರುವಾಗ ಧಾರವಾಡ ನಗರಿಯ ಸೌಂದರ್ಯಕ್ಕೆ ಮನಸೋತು ರಹಿಮತ್ ಖಾನರು 1912ರಲ್ಲಿ ಧಾರವಾಡದಲ್ಲಿ ನೆಲೆಸುವ ನಿರ್ಧಾರಕ್ಕೆ ಬಂದರು. ಹೀಗೆ ಉತ್ತರ ಭಾರತದ ಹಿಂದೂಸ್ತಾನಿ ಸಂಗೀತ ಮತ್ತು ಸಿತಾರ ವಾದ್ಯಗಳು ಕರ್ನಾಟಕ ಪ್ರಾಂತಕ್ಕೆ ಪರಿಚಯಗೊಂಡಿತು. ದಕ್ಷಿಣ ಭಾರತದಲ್ಲಿ ಸಿತಾರ ಸಂಗೀತವು ಬೆಳದು ಬರುವಲ್ಲಿ ರಹಿಮತಖಾನರು ಬಹಳ ದೊಡ್ಡ ಕೊಡುಗೆ ನೀಡಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಅವರ ಮನೆತನ ಪರಂಪರೆಯಲ್ಲಿ ಮಕ್ಕಳು ಮೊಮ್ಮಕ್ಕಳಾಗಿ ಸಿತಾರ ಘರಾನೆಯು ಬೆಳೆದುಬಂದಿತು. ಅವರ ಮೊಮ್ಮಕ್ಕಳಾದ ಬಾಲೆಖಾನ್, ಹಮೀದಖಾನ್, ಉಸ್ಮಾನಖಾನ, ರಫೀಕಖಾನ್, ಶಫೀಕ್‌ಖಾನ್, ಛೋಟೆ ರೆಹಮತ್ ಖಾನ್, ಹೀಗೆ ಸಮಸ್ತ ಕುಟಂಬವೇ ಉತ್ತಮ ಸಿತಾರವಾದಕರಾಗಿ ಸಾಧನೆಗೈದಿದ್ದಾರೆ. ಸಿತಾರವಾದ್ಯದ ವಿಕಾಸದಲ್ಲಿಯೂ ರೆಹಮತ್ ಖಾನ ರವರ

ಕೊಡುಗೆ ಅಪಾರವಾಗಿದ್ದು ವಾದ್ಯದ ಆಕಾರ ಹಾಗೂ ತಂತಿಗಳ ಜೋಡಣಾಕ್ರಮಗಳಲ್ಲಿ ಹಲವು ಸುಧಾರಣೆಗಳನ್ನು ಮಾಡಿದರು. ಅದರಂತೆ ವಾದನ ಶೈಲಿಗಳಲ್ಲಿ ಬಿನ್ ವಾದ್ಯದ ಪ್ರಭಾವವುಳ್ಳ ಆಲಾಪ ಹಾಗೂ ಖಯಾಲ ಅಂಗದ ಗತ್‌ಗಳನ್ನು ವಿಸ್ತರಿಸುವ ಕ್ರಮಗಳನ್ನು ಪ್ರಚಾರಪಡಿಸಿದವರಾಗಿದ್ದಾರೆ. ಹೆಚ್.ಎಂ.ವಿ ಕಂಪನಿಯವರು ಇವರ ಹಲವಾರು ಧ್ವನಿಮುದ್ರಿಕೆಗಳನ್ನು 1925ರ ಸುಮಾರಿಗೆ ಹೊರತಂದರು. ಹೀಗೆ ಉತ್ತರದಿಂದ ದಕ್ಷಿಣಕ್ಕೆ ಸಂಗೀತ ಯಾತ್ರೆಯನ್ನು ಗೈದ ಈ ಮಹಾನುಭಾವರು 1954 ಸೆಪ್ಟೆಂಬರ್ 23 ರಂದು ಧಾರವಾಡದಲ್ಲಿ ನಿಧನರಾದರು. ಸುಮಾರು 1960ರ ದಶಕದಿಂದ ಪ್ರತಿ ವರ್ಷ ಅವರ ಸ್ಮರಣಾರ್ಥ ಬಹುದೊಡ್ಡ ಸಂಗೀತ ಕಾರ್ಯಕ್ರಮವನ್ನು ಧಾರವಾಡದಲ್ಲಿ ಆಯೋಜಿಸಲಾಗುತ್ತದೆ. ಇಲ್ಲಿಯವರೆಗೆ ರಹಿಮತ ಖಾನ ಅವರ ಸ್ಮೃತಿ ಕಾರ್ಯಕ್ರಮದಲ್ಲಿ ದೇಶದ ಬಹುತೇಕ ಎಲ್ಲಾ ಹಿರಿ–ಕಿರಿಯ ಕಲಾವಿದರು ಪಾಲ್ಗೊಂಡಿದ್ದಾರೆ.

**ಉಸ್ತಾದ್ ಅಲ್ಲಾರಖಾ**

'ಅಲ್ಲಾರಖಾ' ತಬಲಾ ವಾದನದಲ್ಲಿ ಸುವಿಖ್ಯಾತವಾದ ಹೆಸರು. ಭಾರತೀಯ ಸಂಗೀತ ಪರಂಪರೆಯಲ್ಲಿ ಅವರಿಗೆ ಅಗ್ರಸ್ಥಾನವಿದೆ. ತಬಲಾ ಕ್ಷೇತ್ರದಲ್ಲಿ ಅಚ್ಚಳಿಯದೇ ಉಳಿಯುವ ಖ್ಯಾತನಾಮರಲ್ಲಿ ಅಲ್ಲಾರಖಾ ಒಬ್ಬರು.



ಅಲ್ಲಾರಖಾ ಅವರು ಜನಿಸಿದ್ದು 1919ರಲ್ಲಿ. ಜಮ್ಮೂವಿನ ಪಂಜಾಬಿ ಕುಟುಂಬ ಒಂದರಲ್ಲಿ ಅವರ ತಂದೆ ಹಾಗಿಮ ಅಲಿ ಕೃಷಿಕರು. ಆದರೆ ಮಗ ಅಲ್ಲಾರಖಾರಿಗೆ ಎಳೆವಯಸ್ಸಿನಲ್ಲಿಯೇ ಸಂಗೀತ ನಾಟಕದ ಗೀಳು ಅಂಟಿಕೊಂಡಿತು. ಆಗಿನ ನಾಟಕಗಳಲ್ಲಿ ಹೆಸರಾಂತ ಸಂಗಿತಗಾರರು ಕೆಲಸ ಮಾಡುತ್ತಿದ್ದರು. ಹೀಗಾಗಿ ಹದಿನಾರನೇ ವಯಸ್ಸಿನಲ್ಲಿ ಯೇ ಅಲ್ಲಾರಖಾ ಪಠಾಣಕೋಟದ ನಾಟಕ ಕಂಪನಿಯಲ್ಲಿ ಸೇರಿದರು. ಕಂಪನಿಯಲ್ಲಿದ್ದ ಕಾದಿರಬಕ್ಷರ ಶಿಷ್ಯ ಲಾಲಮಹ್ಮದರಿಂದ ಅಲ್ಲಾರಖಾರಿಗೆ ತಬಲಾ ಶಿಕ್ಷಣ ದೊರೆಯಿತು. ಅಲ್ಲಾರಖಾ ಪಠಾಣಕೋಟದ ನಾಟಕ ಕಂಪನಿ ಬಿಟ್ಟು ಗುರುದಾಸಪುರಕ್ಕೆ ಬಂದರು. ಸಂಗೀತ ಕಲೆಯ ಬೆಳವಣಿಗೆಗಾಗಿ ಸಂಗಿತ ವಿದ್ಯಾಲಯವನ್ನು ಸ್ಥಾಪಿಸಿದರು. ತನ್ಮೂಲಕ ಅನೇಕ ವಿದ್ಯಾರ್ಥಿಗಳಗೆ ತಬಲಾ ವಿದ್ಯೆ ನೀಡಿದರು.

ಕೆಲದಿನಗಳ ನಂತರ ಅಲ್ಲಾರಖಾ ತಮ್ಮ ಚಿಕ್ಕಪ್ಪನ ಜೊತೆ ಲಾಹೋರಿಗೆ ಹೋದರು. ಅಲ್ಲಿ ಅವರಿಗೆ ಉಸ್ತಾದ ಕಾದಿರಬಕ್ಷರಿಂದ ತಬಲಾದ ಹೆಚ್ಚಿನ ವಿದ್ಯೆ ದೊರೆಯಿತು. ತಮ್ಮ ಗುರುವಿನ ಗುರುಗಳಿಂದ ವಿದ್ಯೆ ಪಡೆಯುವ ಅವಕಾಶ ದೊರೆತದ್ದು ತಮ್ಮ ಸೌಭಾಗ್ಯವೆಂದು ಅವರು ಭಾವಿಸಿದ್ದರು. ಕಾದಿರಬಕ್ಷರ ಮಾರ್ಗದರ್ಶನದಲ್ಲಿ ಕೆಲದಿನ ಕಠಿಣ ಸಾಧನೆಗೈದರು. ತಬಲಾ ವಿದ್ಯೆಯಲ್ಲಿ ಪಾರಂಗತರಾದರು. ಅವರ ಖ್ಯಾತಿ ಎಲ್ಲೆಡೆ ಹರಡಿತು. ಲಾಹೋರ, ದೆಹಲಿ ರೇಡಿಯೋ ಕೇಂದ್ರಗಳು ಅವರ ತಬಲಾವಾದನ ಪ್ರಸಾರ ಮಾಡಿದವು.

ಭಾರತದ ಅನೇಕ ಕಡೆಗಳಲ್ಲಿ ಅವರ ಕಾರ್ಯಕ್ರಮುಗಳು ಏರ್ಪಟ್ಟವು. ವಿವಿದೆಡೆಗಳಲ್ಲಿ ಕಾರ್ಯಕ್ರಮ ಪ್ರದರ್ಶಿಸುತ್ತಾ ಅವರು 1937 ರಲ್ಲಿ ಲಾಹೋರಿನಿಂದ ಮುಂಬೈಗೆ ಬಂದರು. ಮುಂಬೈಗೆ ಬಂದು ಹೋಗುವ ಅಸಂಖ್ಯಾತ ಕಲಾವಿದರ ಸಹಯೋಗ ಅವರಿಗೆ ದೊರೆಯಿತು. ಮುಂಬೈ ಆಕಾಶವಾಣಿ ಕೇಂದ್ರ ನಿಲಯದ ಕಲಾವಿದರಾಗಿ ಕೆಲವರ್ಷಕೆಲಸ ಮಾಡಿದರು. ಮುಂಬೈಯ ಚಲನಚಿತ್ರ ಪ್ರಪಂಚ ಅವರನ್ನು ಬಹುವಾಗಿ ಆಕರ್ಷಿಸಿತು.

ಅಂದಿನಿಂದಲೂ ಮುಂಬೈ ಚಲನಚಿತ್ರದ ಬೀಡಾಗಿತ್ತು. ಅಂದಿನ ಚಲನಚಿತ್ರ ಪ್ರಪಂಚಕ್ಕೆ ಅಲ್ಲಾರಖಾರಂತಹ ಸುವಿಖ್ಯಾತ ಸಂಗೀತಗಾರರ ಅವಶ್ಯಕತೆ ಇತ್ತು ಮತ್ತು ಚಿತ್ರ ಪ್ರಪಂಚ ದತ್ತ ಅವರ ಮನಸ್ಸು ಹರಿದಿತ್ತು. ಚಿತ್ರ ಜಗತ್ತಿನ ನಿಕಟ ಸಂಪರ್ಕ ಅವರಿಗಾಗಿ 1942ರಲ್ಲಿ ರೇಡಿಯೋ ಕೇಂದ್ರದ ವೃತ್ತಿಗೆ ರಾಜೀನಾಮೆ ನೀಡಿ ಚಿತ್ರಕ್ಷೇತ್ರವನ್ನು ಸೇರಿಕೊಂಡರು. ಅಂದಿನ ಚಲನ ಚಿತ್ರ ಪ್ರಪಂಚದಲ್ಲಿ ಸಂಗೀತಗಾರರಿಗೆ ಗೌರವಯುತಸ್ಥಾನವಿತ್ತು. ಅಲ್ಲಿ ಅವರಿಗೆ ಕೀರ್ತಿಗೂ, ಹಣಕ್ಕೂ ಕೊರತೆಯರಲಿಲ್ಲ.

ಅನೇಕ ಚಿತ್ರ ನಿರ್ಮಾಣ ಸಂಸ್ಥೆಗಳು ಅಲ್ಲಾರಖಾರ ಸೇವೆ ಪಡೆಯಲು ಮುಂದೆ ಬಂದವು. ಸನ್‌ರೈಸ್ ಪಿಕ್ಚರ್ಸ, ಮೋಹನಸ್ಟುಡಿಯೋ, ಸಾದಿಕ ಪ್ರೋಡಕ್ಷನ ಮುಂತಾದ ಚಿತ್ರ ಸಂಸ್ಥೆಗಳು ಅಲ್ಲಾರಖಾರ ಸಂಗೀತ ನಿರ್ದೇಶನದ ಲಾಭ ಪಡೆದವು ಅಲ್ಲಾರಖಾರ ಪ್ರತಿಭೆಕಂಡು 'ರಂಗಮಹಲಸ್ಟುಡಿಯೋ' ಖಾಯಂ ಆಗಿ ತನ್ನ ಸಂಸ್ಥೆಯ ಸಂಗೀತ ನಿರ್ದೇಶಕರಾಗಿ ನೇಮಿಸಿಕೊಂಡಿತು.

ಅಲ್ಲಾರಖಾರು ಚಲನಚಿತ್ರ ಕ್ಷೇತ್ರದಂತೆ ಸಂಗೀತ ಜಗತ್ತಿಗೊ ಅಪಾರ ಕೊಡುಗೆ ನೀಡಿದ್ದಾರೆ. ಅವರ ಅಪ್ರತಿಮೆ ಪ್ರೌಢಿಮೆಯಿಂದ ಭಾರತೀಯ ಸಂಗೀತ ಪ್ರಪಂಚ ಶ್ರೀಮಂತವಾಗಿದೆ. ಅವರ ಕಲಾಸೇವೆ ನಿಜಕ್ಕೂ ಅಪ್ರತಿಮೆ.

ಅಲ್ಲಾರಖಾ ಅವರದು 'ಪಂಜಾಬಿ ಘರಾಣಿ'ಯ ತಬಲಾವಾದನ. ಈ ಘರಾಣೆಯ ಉಜ್ವಲ ಪರಂಪರೆಯನ್ನು ಬೆಳಗಿಸಿದ ಕೀರ್ತಿ ಅವರಿಗೂ ಸಲ್ಲುತ್ತದೆ. ಭಾರತೀಯ ತಬಲಾ ಪರಂಪರೆಗೆ ಈ ಘರಾಣೆಯ ಕಲಾವಿದರ ಸೇವೆ ಅನುಪಮ.

ಪಂ. ರವಿಶಂಕರ ಅವರ ಜೊತೆ ತಬಲಾ ಸಾಥಿದಾರರಾಗಿ ಅವರು ಅನೇಕ ದೇಶಗಳನ್ನು ಸುತ್ತಿದ್ದಾರೆ. ಸುಮಾರು ಇಪ್ಪತ್ತೈದಕ್ಕೂ ಹೆಚ್ಚಿನ ವರ್ಷಗಳ ಕಾಲ ಅವರು ರವಿಶಂಕರರ ಜೊತೆಗೆ ತಬಲಾ ಸಾಥ ನೀಡಿದ್ದಾರೆ. ಒಬ್ಬರು ಸಿತಾರ ವಾದನದಲ್ಲಿ,ಇನ್ನೊಬ್ಬರದು ತಬಲಾವಾದನದಲ್ಲಿ ಅಂತರರಾಷ್ಟ್ರೀಯ ಪ್ರಖ್ಯಾತಿ ಸಾಧಿಸಿದ ಅಪ್ರತಿಮರು.

ಭಾರತದ ಸರ್ವಶ್ರೇಷ್ಟ ತಬಲಾವಾದಕರಲ್ಲಿ ಒಬ್ಬರೆನಿಸಿದ ಅಲ್ಲಾರಖಾರ ತಬಲಾ ಧ್ವನಿಮುದ್ರಿಕೆಗಳು ವಿಶ್ವಮಾರುಕಟ್ಟೆಯಲ್ಲಿ ಸುಪ್ರಸಿದ್ಧವಾಗಿವೆ. ದೂರದರ್ಶನ ಕೇಂದ್ರವು ಅವರ ತಬಲಾ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದೆ. ಅಲ್ಲಾರಖಾರ ಶಿಷ್ಯಸಂಪತ್ತು ತುಂಬ ಸಮೃದ್ಧವಾಗಿದೆ. ಅವರಲ್ಲಿ ವಿಶೇಷ ಉಲ್ಲೇಖನೀಯವಾದ ಹೆಸರು ಅವರ ಮಗ ಉಸ್ತಾದ ಝಾಕೀರ ಹುಸೇನ್. ಅಲ್ಪಾವಧಿಯಲ್ಲೇ ಅಂತರರಾಷ್ಟ್ರೀಯ ಖ್ಯಾತಿ ಪಡೆದ ಝಾಕೀರ ಹುಸೇನ ಭಾರತ ಮಾತ್ರವಲ್ಲದೆ ಜಗತ್ತ ಪ್ರಸಿದ್ಧ ತಬಲವಾದಕರು ಆಗಿದ್ದಾರೆ.

**ಪಂ. ಬಸವರಾಜ ಬೆಂಡಿಗೇರಿ :**



ದೇಶದ ಪ್ರಮುಖ ತಬಲ ವಾಕದರಲ್ಲಿ ಪಂ. ಬಸವರಾಜ ಬೆಂಡಿಗೇರಿಯವರು ಒಬ್ಬರು. ದಿನಾಂಕ 22-9-1928 ರಂದು ಬೆಳಗಾಂವ ಜಿಲ್ಲೆಯ "ಕಾಸ್‌ಬಾಗ್"ದಲ್ಲಿ ಜನಿಸಿದರು. ಇವರ ತಂದೆ ಶಂಕರಪ್ಪಾ ಬೆಂಡಿಗೇರಿಯುವರು. ಸಂಗೀತ ಪ್ರೇಮಿಯಾಗಿದ್ದು ತಬಲ ನುಡಿಸುತ್ತಿದ್ದರು. 'ಮನೆಯೇ ಮೊದಲ ಪಾಠಶಾಲಾ ಎಂಬಂತೇ' ತಂದೆಯವರೇ ಮೊದಲ ಗುರುವಾಗಿ ಕೆಲವು ಸಮಯದವರೆಗೆ ತಬಲ ಶಿಕ್ಷಣ ಹೇಳಿಕೊಟ್ಟರು.

ಹುಟ್ಟು ಮಂದ ದೃಷ್ಟಿಯುಳ್ಳ ಮಗನ ವಿಧ್ಯಾಭ್ಯಾಸದ ಬಗ್ಗೆ ತಂದೆಯವರಿಗೆ ಚಿಂತೆಯಾಯಿತು. ಅಷ್ಟರಲ್ಲಿ ಪ್ರಸಿದ್ಧ ಕೀರ್ತನಕಾರರಾದ ಶ್ರೀ ಸರ್ವೋತ್ತಮ ಆಚಾರ್ಯ ಮುಂಡರಗಿ ಅವರಿಂದ ಬೆಂಡಿಗೇರಿಯವರಿಗೆ ಸಾಕಷ್ಟು ಪ್ರೇರಣೆ ಒದಗಿ ಬಂತು.

ಮುಂಡರಗಿ ಅವರ ಪ್ರೇರಣೆಯಿಂದ ಬಸವರಾಜರಿಗೆ ಹೆಚ್ಚಿನ ವಿಧ್ಯಾಭ್ಯಾಸಕ್ಕಾಗಿ ಮಿರಜ ನಿವಾಸಿಯಾದ ಪ್ರಸಿದ್ಧ ತಬಲವಾದಕರಾದ 'ಉಸ್ತಾದ್ ಮೆಹಬೂಬ್‌ಖಾನ' ಸಾಹೇಬ ಮೀರಜಕರ ಅವರ ಬಳಿ ಕರೆದೊಯ್ದು ತಬಲ ಶಿಕ್ಷಣ ಪ್ರಾರಂಭಿಸಿದರು. ಹೀಗೆ ನಿರಂತರ ಕಠಿಣ ಪರಿಶ್ರಮದಿಂದ ತಬಲ ಅಭ್ಯಾಸ ಮಾಡಿದರು.

ಮುಂದೆ ಗುರುಗಳಾದ ಉಸ್ತಾದ್ ಮೆಹಬೂಬ ಖಾನ್‌ರು 1939ರಲ್ಲಿ ಮಿರಜದಿಂದ ಕೊಲ್ಲಾಪುರಕ್ಕೆ ಹೋದರು. ಆ ಸಮಯದಲ್ಲಿ ಇವರ ತಬಲ ಶಿಕ್ಷಣದಲ್ಲಿ ಸ್ವಲ್ಪ ಅಡೆ–ತಡೆ ಉಂಟಾಗಿ ಪಂಡಿತ ಕಾಗಲಕರ್ ಬುವಾ ಅವರ ಹತ್ತಿರ ಗಾಯನ ಅಭ್ಯಾಸ ಮಾಡಿದರು. ಆ ಸಮಯದಲ್ಲಿ ಪಂ. ಬೆಂಡಿಗೇರಿಯವರಿಗೆ ಶ್ರೇಷ್ಠ ಸಂಗೀತಗಾರದಂತಹ ಪಂಡಿತ ರಾಮದುರ್ಗಕರ ಬುವಾ ಮತ್ತು ಪಂ. ವಿಠಲ್‌ರಾವ ಕೋರೆಗಾಂವಕರ ಅವರ ಜೊತೆ ತಬಲ ಸಾಥ ಸಂಗತ ಮಾಡುವ ಅವಕಾಶ ದೊರೆಯಿತು. ಮುಂದೆ 1942 ರಲ್ಲಿ ಉಸ್ತಾದ ಮಹಬೂಬಖಾನರು ಬೆಂಡಿಗೇರಿ ಅವರಿಗೆ ಕೊಲ್ಲಾಪುರಕ್ಕೆ ಕರೆದೊಯ್ದು ಮೂರು ವರ್ಷಗಳ ಕಾಲ ತಬಲ ಶಿಕ್ಷಣ ನೀಡಿದರು. ಮುಂದೆ ಗುರುಗಳಿಂದ ಶಿಕ್ಷಣ ಪಡೆದು ಸಾಥ ಸಂಗತ ಮತ್ತು ತಬಲ ಸ್ವತಂತ್ರವಾದನದಲ್ಲಿ ಪ್ರಾವೀಣ್ಯತೆಯನ್ನು ಪಡೆದರು. ದಿಲ್ಲಿ ಘರಾಣೆ ಮತ್ತು ಪೂರಬವಾದನ ಶೈಲಿಯನ್ನು ವಿಶೇಷವಾಗಿ ಇವರು ನುಡಿಸುತ್ತಿದ್ದರು. ಅತಿ ಚಿಕ್ಕ ವಯಸ್ಸಿನಲ್ಲಿ ತಮ್ಮ ತಬಲ ವಾದನವನ್ನು ಮುಂಬೈ ಆಕಾಶವಾಣಿ ಕೇಂದ್ರದಿಂದ ನೀಡಿದರು. ಇವರ ವಾದನದ ವೈಷಿಷ್ಟ್ಯತೆಯೆಂದರೆ ತಬಲ ಸಾಥ ಸಂಗತ ಮಾಡುವುದು. ಇವರ ಸಾಥ–ಸಂಗತ ಮಾಡುವ ರೀತಿಯೇ ಇನ್ನುಳಿದ ಕಲಾವಿದರಿಗಿಂತ ತೀರಾ ಭಿನ್ನವಾಗಿತ್ತು.

ಪಂಡಿತ ಬಸವರಾಜ ಬೆಂಡಿಗೇರಿಯವರು ಮೊಟ್ಟ ಮೊದಲಿಗೆ ಭಾರತೀಯ ಸಂಗೀತ ಶಾಲೆ ಮುಂಬೈನಲ್ಲಿ ತಬಲ ಶಿಕ್ಷಕರಾದರು. ಈ ಶಾಲೆಯ ಸಂಚಾಲಕರು ಪ್ರೊ. ದೇವಧರ ಅವರು ಆಗಿದ್ದರು. ಈ ವೇಳೆಯಲ್ಲಿ ಇವರಿಗೆ ಅನೇಕ ಪ್ರಸಿದ್ಧ ಕಲಾವಿದರ ಜೊತೆಗೆ ಸಾಥ–ಸಂಗತ ಮಾಡುವ ಅವಕಾಶ ದೊರೆಯಿತು. ಆ ಸಂಗೀತಗಾರರಲ್ಲಿ ಉಸ್ತಾದ ವಿಲಾಯತ್ ಹುಸೇನಖಾನ (ಗಾಯನ), ಡಾ. ಬಸವರಾಜ ಗುರು (ಗಾಯನ), ಪಂ. ಭೀಮಸೇನ ಜೋಶಿ (ಗಾಯನ), ಪಂ. ಕುಮಾರ ಗಂಧರ್ವ, ಉಸ್ತಾದ ಬಡೆ ಗುಲಾಮ ಅಲಿಖಾನ, ಡಂ. ಖ. ವಿ. ಪಲುಸ್ಕರ, ಪಂ. ವ್ಹಿ. ಜಿ. ಜೋಗ (ಪಿಟೀಲು), ಪಂ. ಗಜಾನನ ಬುವಾ ಜೋಶಿ (ಪಿಟೀಲು), ಪಂ. ರವಿಶಂಕರ (ಸೀತಾರ), ಶ್ರೀಮತಿ ಮೂಗುಬಾಯಿ ಕುರಡಿಕರ್ (ಗಾಯನ), ಶ್ರೀಮತಿ ಹೀರಾಬಾಯಿ